ಅ) ಹೌದು. ಇಲ್ಲಿಯವರೆಗೆ ೩,೯೩೮ ಕುಟುಂಬಗಳಿಗೆ ಪಡಿತರ ಚೀಟಿಗಳನ್ನು ನೀಡಲಾಗಿದೆ.

ಇ) ಉಳಿದ ಕುಟುಂಬದವರು ದಾಖಲಾತಿಗಳೊಂದಿಗೆ ಭರ್ತಿ ಮಾಡಿದ ಅರ್ಜಿಯನ್ನು ನೀಡಿದಲ್ಲಿ ಸೂಕ್ತ ವಿಚಾರಣೆ ಮಾಡಿ ಪಡಿತರ ಚೀಟಿಗಳನ್ನು ನೀಡಲಾಗುತ್ತದೆ.

ಪ್ಲಾಂಟೇಷನ್ ಬೆಳೆಗಳ ಮೇಲೆ ಖರೀದಿ ತೆರಿಗೆಯನ್ನು ವಿಧಿಸಿರುವ ಬಗ್ಗೆ

೨೯೬. ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ).—ಮಾನ್ಯ ಆರ್ಥಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸರ್ಕಾರವು ಪ್ಲಾಂಟೇಷನ್ ಬೆಳೆಗಳ ಮೇಲೆ ಖರೀದಿ ತೆರಿಗೆಯನ್ನು ವಿಧಿಸಲಾಗಿದೆಯೇ ?

ಆ) ಹಾಗಾದರೆ, ವಿಧಿಸಿರುವ ತೆರಿಗೆಯ ಪ್ರಮಾಣವೆಷ್ಟು ?

ಇ) ಪ್ಲಾಂಟೇಷನ್ ಬೆಳೆಗಳ ಮೇಲೆ ವಿಧಿಸಿರುವ ಖರೀದಿ ತೆರಿಗೆಯನ್ನು ತೆಗೆದುಹಾಕುವ ಪ್ರಸ್ತಾವನೆ ಇದೆಯೇ ?

ಶ್ರೀ ಎಂ. ರಾಜಶೇಖರಮೂರ್ತಿ(ಅರ್ಥ ಸಚಿವರು).—

ಅ) ಕಾಫಿಯ ಮೇಲೆ ಖರೀದಿ ತೆರಿಗೆ ವಿಧಿಸಲಾಗಿದ್ದು ಉಳಿದ ತೋಟಗಾರಿಕೆ ಬೆಳೆಗಳ ಮೇಲೆ ವ್ಯಾಪಾರ ತೆರಿಗೆ ವಿಧಿಸಲಾಗಿದೆ.

ಆ) ೧) ಕಾಫಿ : ಶೇಕಡ ೧೩

೨) ಟೀ : ಶೇಕಡ ೧೩

೩) ರಬ್ಬರ್ : ಶೇಕಡ ೮

೪) ಮೆಣಸು : ಶೇಕಡ ೫

೫) ಏಲಕ್ಕಿ : ಶೇಕಡ ೪

ಇ) ಇಲ್ಲ.

ರಾಜ್ಯದ ಉದ್ಯೋಗ ವಿನಿಮಯ ಕೇಂದ್ರಗಳ ದಾಖಲೆಯಲ್ಲಿ ನೋಂದಾಯಿಸಿರುವ ಕುಶಲ ಮತ್ತು ಅಕುಶಲ ಅಭ್ಯರ್ಥಿಗಳ ಬಗ್ಗೆ

೪೩೭. ಶ್ರೀ ಡಿ. ಬಿ. ಚಂದ್ರೇಗೌಡ (ತೀರ್ಥಹಳ್ಳಿ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿ, ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧ ರಾಜ್ಯದ ಉದ್ಯೋಗ ವಿನಿಮಯ ಕೇಂದ್ರಗಳ ದಾಖಲೆಯಲ್ಲಿ ನೋಂದಾಯಿಸಿರುವ ಒಟ್ಟು ಕುಶಲ ಮತ್ತು ಅಕುಶಲ ಅಭ್ಯರ್ಥಿಗಳ ಸಂಖ್ಯೆ :

೨ ೧೯೫೯-೬೦ನೇ ಸಾಲಿನ ಫೆಬ್ರುವರಿ ಅಂತ್ಯದವರೆಗೆ ಉದ್ಯೋಗ ವಿನಿಮಯ ಕೇಂದ್ರಗಳ ಮೂಲಕ ಉದ್ಯೋಗ ಪಡೆದ ಒಟ್ಟು ಅಭ್ಯರ್ಥಿಗಳ ಸಂಖ್ಯೆ :

೩ ಈಗಾಗಲೇ ಉದ್ಯೋಗದಲ್ಲಿರುವ ಸಾಕಷ್ಟು ಅಭ್ಯರ್ಥಿಗಳು ಉದ್ಯೋಗ ವಿನಿಮಯ ಕೇಂದ್ರಗಳ ದಾಖಲೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

೪ ಹಾಗಿದ್ದಲ್ಲಿ ಉದ್ಯೋಗ ವಿನಿಮಯ ಕೇಂದ್ರಗಳ ದಾಖಲೆಯನ್ನು ಪರಿಪೂರ್ಣಗೊಳಿಸುವ ಸಲುವಾಗಿ ತೆಗೆದುಕೊಂಡ ಕ್ರಮ.

ಶ್ರೀ ಬಿ. ಶಿವಣ್ಣ(ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಮಂತ್ರಿಗಳು).—

೧ ಕುಶಲ — ೮,೭೨,೯೬೬

ಅಕುಶಲ — ೩,೭೩,೨೯೯

೨ ೭,೩೦೬

೩ ಹೌದು

(೧) ಕರ್ನಾಟಕ ಲೋಕ ಸೇವಾ ಆಯೋಗ/ಇಲಾಖಾ ನೇಮಕಾತಿ ಸಮಿತಿಗಳ/ ಕಾರ್ಪೊರೇಷನ್ ಮಂಡಳಿಗಳ ಮೂಲಕ ಆಯ್ಕೆಯಾದ ಅಭ್ಯರ್ಥಿಗಳ ನೋಂದಣಿ ಸಂಖ್ಯೆಯನ್ನು ರದ್ದುಪಡಿಸುವುದು

(೨) ಅನುಕಂಪದ ಆಧಾರದ ಮೇಲೆ ವಿವಿಧ ಇಲಾಖೆಗಳಲ್ಲಿ ನೇಮಕಾತಿಯಾದ ಅಭ್ಯರ್ಥಿಗಳ ನೋಂದಣಿಯನ್ನು ರದ್ದುಪಡಿಸುವುದು.

(೩) ಕಾಲಕಾಲಕ್ಕೆ ನವೀಕರಿಸದ ಅಭ್ಯರ್ಥಿಗಳ ನೊಂದಣಿ ರದ್ದತಿ ಮಾಡುವುದು.

(೪) ಉದ್ಯೋಗ ವಿನಿಮಯ ಕೇಂದ್ರಗಳ ಮೂಲಕ ಉದ್ಯೋಗ ಪಡೆದವರ ನೋಂದಣಿಯನ್ನು ರದ್ದುಪಡಿಸುವುದು,

ಸಣ್ಣ ಉಳಿತಾಯ ಸಂಗ್ರಹಣೆ ಮೇಲೆ ೧೯೮೮-೮೯ ಮತ್ತು ೧೯೮೯-೯೦ರ ಅವಧಿಯಲ್ಲಿ ಪಡೆದ ಸಾಲದ ವಿವರ

ಳಿಖಿ. ಶ್ರೀ ಡಿ. ಬಿ. ಚಂದ್ರೇಗೌಡ (ತೀರ್ಥಹಳ್ಳಿ).— ಮಾನ್ಯ ಆರ್ಥಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ೧೯೮೮-೮೯ ಮತ್ತು ೧೯೮೯-೯೦ರ ಫೆಬ್ರವರಿ ತಿಂಗಳ ಅಂತ್ಯದವರೆಗೆ ರಾಜ್ಯದಲ್ಲಿ ಸಣ್ಣ ಉಳಿತಾಯದಿಂದ ಸಂಗ್ರಹಿಸಲಾದ ಒಟ್ಟು ಸಂಗ್ರಹಣೆ ?

(ಆ) ಇದರಲ್ಲಿ, ೧೯೮೮-೮೯ ಮತ್ತು ೧೯೮೯-೯೦ನೇ ಫೆಬ್ರವರಿ ತಿಂಗಳ ಅಂತ್ಯದವರೆಗೆ ಸರ್ಕಾರವು ಕೇಂದ್ರದಿಂದ ಪಡೆದ ಸಾಲದ ವಿವರ ?

(ಇ) ೧೯೮೮-೮೯ನೇ ಸಾಲಿಗೆ ಹೋಲಿಸಿದರೆ ೧೯೮೯-೯೦ನೇ ಸಾಲಿನಲ್ಲಿ ಸಣ್ಣ ಉಳಿತಾಯ ಸಂಗ್ರಹಣೆಯ ಹೆಚ್ಚಾಗಿರುವುದೇ ?

(ಈ) ಸಂಗ್ರಹಣೆ ಹೆಚ್ಚಾಗಿರದಿದ್ದರೆ, ಅದಕ್ಕೆ ಕಾರಣಗಳೇನು ?

(ಉ) ರಾಜ್ಯದಲ್ಲಿ ಸಣ್ಣಉಳಿತಾಯ ಸಂಗ್ರಹಣೆಯನ್ನು ಅಧಿಕಗೊಳಿಸಲು ಕೈಗೊಂಡ ಕ್ರಮಗಳೇನು?

ಶ್ರೀ ಎಂ. ರಾಜಶೇಖರ ಮೂರ್ತಿ (ಹಣಕಾಸು ಸಚಿವರು).—

(ಅ)

ವರ್ಷ	ಸಂಗ್ರಹಣೆ (ರೂ. ಕೋಟಿಗಳಲ್ಲಿ)	
	ಒಟ್ಟು	ನಿವ್ವಳ
೧೯೮೮-೮೯	೭೩೨.೮೩	೩೦೫.೫೮
೧೯೮೯-೯೦	೭೭೪.೦೩	೩೨೫.೦೯
(೩೮-೨-೧೯೯೦ರ ವರೆಗೆ)		

(ಆ)

ವರ್ಷ	ಪಡೆದ ಸಾಲ (ರೂ. ಕೋಟಿಗಳಲ್ಲಿ)
೧೯೮೮-೮೯	೧೮೧.೪೪
೧೯೮೯-೯೦	೩೭೨.೭೮
(೩೮-೨-೧೯೯೦ರ ವರೆಗೆ)	

(ಇ) ಹೌದು

(ಈ) ಉದ್ಭವಿಸುವುದಿಲ್ಲ-

(ಉ) ಸಣ್ಣ ಉಳಿತಾಯ ಸಂಗ್ರಹಣೆಯನ್ನು ಅಧಿಕಗೊಳಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ:—

೧) ಉಳಿತಾಯದಾರರಿಗಾಗಿ ಬಹುಮಾನ ಯೋಜನೆ ?

೨) ಅಧಿಕೃತ ಏಜೆಂಟರುಗಳ ಸ್ಪರ್ಧಾ ಯೋಜನೆ,